# ಹಿರಿಯ ಸಮಾಜವಾದಿ-ಕಾರ್ಮಿಕ ಮುಖಂಡ ಎಸ್. ವೆಂಕಟರಾಮ್

ನಮ್ಮ ದೇಶದ ರಾಜಕಾರಣದ ಚಿತ್ರ ದಿನಬೆಳಗಾಗುವದರಲ್ಲಿ ಅದಲು ಬದಲಾಗಿರುತ್ತದೆ. ಹಿಂದಿನ ದಿನ ಪ್ರತಿಪಾದಿಸುತ್ತಿದ್ದ ತತ್ವರಾಜಕಾರಣಕ್ಕೆ ತೀರಾ ವಿರುದ್ಧವಾದ ಸಮರ್ಥನೆ ಮಾರನೆಯ ದಿನ ಪತ್ರಿಕೆಗಳಲ್ಲಿ ರಾರಾಜಿಸಿ, ಆ ರಾಜಕಾರಣಿ ''ಹೀರೋ'' ಆಗಿ ಬಿಡುತ್ತಾನೆ. ಬಹುಶಃ ಇಂದು ನಮ್ಮ ಜನ ಯಾವ ರಾಜಕಾರಣಿ ಎಷ್ಟೇ ಎಡ ಅಥವಾ ಬಲಪಂಥೀಯನಾದರೂ ಅವನ ತಾತ್ವಿಕ ಕಸರತ್ತನ್ನು ಹುಸಿನಗೆಯಿಂದ ಓದಿ ಮರೆತು ಬಿಡುತ್ತಾರೆ. ಈ ದೇಶಕ್ಕೆ ಒಂದು ಚೈತನ್ಯದಾಯಕ ಆರೋಗ್ಯಪೂರ್ಣ ಬದುಕನ್ನು ನೀಡಲು ಅನೇಕರು ಸ್ವಾತಂತ್ರ್ಯಪೂರ್ವದಲ್ಲಿ ಮಹಾತ್ಮಾ ಗಾಂಧಿಯವರಿಂದ ಪ್ರಾರಂಭಗೊಂಡು, ಸ್ವಾತಂತ್ರ್ಯಾನಂತರ ಸಮಾಜವಾದಿ ಹೋರಾಟಗಾರರು, ಜಡ್ಡುಗಟ್ಟಿದ ನಮ್ಮ ಸಾಮಾಜಿಕ ಬದುಕನ್ನು ಬಡಿದೆಬ್ಬಿಸಲು ಪ್ರಯತ್ನಿಸಿದರು. ಅಂತಹವರಲ್ಲಿ ಡಾ|| ರಾಮಮನೋಹರ ಲೋಹಿಯಾ, ಸಮಾಜವಾದದ ಪ್ರಮುಖ ಚಿಂತಕ-ರಾಜಕಾರಣಿ. ಲೋಹಿಯಾರ ವಿಚಾರಧಾರೆಗೆ ಆಕರ್ಷಿತರಾಗಿ, ತಮ್ಮ ಇಡೀ ಬದುಕನ್ನೇ ದುಡಿಯುವ ವರ್ಗದ ಏಳಿಗೆಗೆ ಮುಡುಪಾಗಿಟ್ಟು ಚಿಕ್ಕ ವಯಸ್ಸಾದ 57ನೇ ವರ್ಷದಲ್ಲಿ ವಿಧಿವಶರಾದ ಕಾರ್ಮಿಕ ನೇತಾರ ಎಸ್. ವೆಂಕಟರಾಮ್ ಲೋಹಿಯಾರ ಅಚ್ಚುಮೆಚ್ಚಿನ ಶಿಷ್ಯರು.

ಕರ್ನಾಟಕ ರಾಜ್ಯಮಟ್ಟದಲ್ಲಿ ಸಮಾಜವಾದಿ ಆಂದೋಳನವನ್ನು ಶಾಂತವೇರಿಗೋಪಾಲಗೌಡರ ಜೊತೆಗೂಡಿ ಸಂಘಟಿಸುವುದರ ಜೊತೆಗೆ ರಾಷ್ಟ್ರಮಟ್ಟದಲ್ಲಿ ಡಾ||ಲೋಹಿಯಾ, ಹೆಚ್. ವಿ. ಕಾಮತ್, ಎಸ್. ಜಿ. ಗೋರೆ, ಮಧುಲಿಮಯೆ, ಜಾರ್ಜ್ ಫರ್ನಾಂಡಿಸ್, ರಬಿ ರೇ, ಮಧು ದಂಡವತೆ ಮುಂತಾದ ಸಮಾಜವಾದಿಗಳ ಜೊತೆಗೂಡಿ ಸಮಾಜವಾದಿ ಆಂದೋಳನಕ್ಕೆ ಭದ್ರ ಬುನಾದಿ ಹಾಕಿದರು. ಅದು ಮುಂಬಯಿ ಇರಬಹುದು, ಪಾಟ್ನಾ ಆಗಿರಬಹುದು, ಕಲ್ಕತ್ತ ತಮಿಳುನಾಡು ಆಗಿರಬಹುದು. 60-70ರ ದಶಕದ ಹೊಸ ಪೀಳಿಗೆಯ ರಾಜಕಾರಣಿಗಳಿಗೆ ವೆಂಕಟರಾಮ್ ಒಬ್ಬ ಅಚ್ಚುಮೆಚ್ಚಿನ ಕಾಮ್ರೇಡ್ ಆಗಿದ್ದರು. ಬೆಂಗಳೂರಿನ ಬಿನ್ನಿಮಿಲ್, ಮಿನರ್ವಮಿಲ್ ನೌಕರರ ಸಂಘದ ಕಾರ್ಯಚಟುವಟಿಕೆಗಳಿಗೆ ರಾಷ್ಟ್ರೀಯ ಹಿಂದ್ ಮಜ್ದೂರ್ ಸಭಾದ ಕಾರ್ಯ ಚಟುವಟಿಕೆಗಳಿಗೆ ಕೊಡುವಷ್ಟೇ ಗಮನವನ್ನು ಕೊಡುತ್ತಿದ್ದರು. ಅವರಿಗೆ ಸಂಘಟನೆಯ ಸಂಖ್ಯೆಗಿಂತ, ಸಮಸ್ಯೆಯ ಪರಿಹಾರ ಮುಖ್ಯವಾಗಿತ್ತು.

ವೆಂಕಟರಾಮ್ 1924ರ ಜುಲೈ 24ರಂದು ಜನಿಸಿದರು. ಕೋಲಾರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕು ಸಾದಲಿಯ ಶ್ರೀ ಚೆನ್ನಪ್ಪ ಮತ್ತು ಶ್ರೀಮತಿ ನರಸಮ್ಮ ದಂಪತಿಗಳ ಏಕಮಾತ್ರ ಪುತ್ರ. ಐವರು ಸೋದರಿಯರು. ತಾಯಿಯ ತವರು ಹೊಸಕೋಟೆ ತಾಲ್ಲೂಕು ಹಂದೇನಹಳ್ಳಿ. ತಂದೆ ಶಾಲಾ ಮಾಸ್ತರು, ಹಂದೇನ ಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲಿ ಪ್ರೌಢಶಿಕ್ಷಣ, ನಂತರ ಆಗ ಮೈಸೂರು ವಿಶ್ವವಿದ್ಯಾಲಯದಿಂದ ಸಿವಿಲ್ ಇಂಜನಿಯರಿಂಗ್‌ನಲ್ಲಿ ಡಿಪ್ಲೋಮಾ ಪದವಿ ಪಡೆದು, ಮುಂಬಯಿ ಮಹಾನಗರದಲ್ಲಿ ಕೇಂದ್ರ ಸರ್ಕಾರದ ಡ್ರಾಫ್ಟ್‌ಮೆನ್ ಆಗಿ ಐದು ವರ್ಷ ಸೇವೆ ಸಲ್ಲಿಸಿದರು.

ಕೇಂದ್ರ ಸರ್ಕಾರದ ಉದ್ಯೋಗದಲ್ಲಿದ್ದಾಗಲೇ ವೆಂಕಟರಾಮ್ 1945ರಲ್ಲಿ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷ ಸೇರಿ, ವಾರ್ಡ್ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದ ಕಾರ್ಯದರ್ಶಿಯಾದರು. ನಂತರ 1947-51ರವರೆಗೆ ಸೋಷಿಯಲಿಸ್ಟ್ ಪಕ್ಷದ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. 1955ರಿಂದ 68ರವರೆಗೆ ಕರ್ನಾಟಕ ರಾಜ್ಯದ ಸೋಷಿಯಲಿಸ್ಟ್ ಪಕ್ಷದ ಜಂಟಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದರು. 1969ರಿಂದ 71ರವರೆಗೆ ಅಖಿಲಭಾರತ ಸಂಯುಕ್ತ ಸೋಷಿಯಲಿಸ್ಟ್ ಪಕ್ಷದ ಜಂಟಿ ಕಾರ್ಯದರ್ಶಿಯಾಗಿ, 1974ರಿಂದ 1977ರವರೆಗೆ ಪಕ್ಷದ ಕೇಂದ್ರ ಪಾರ್ಲಿಮೆಂಟರಿ ಮಂಡಲಿ ಕಾರ್ಯದರ್ಶಿಯಾಗಿ, 1977 ರಿಂದ 1979ರವರೆವಿಗೆ ರಾಜ್ಯ ಜನತಾಪಕ್ಷದ ಕಾರ್ಯದರ್ಶಿಯಾಗಿ ಬಹುಮುಖ ಸೇವೆ ಸಲ್ಲಿಸಿದರು.

ವೆಂಕಟರಾಮ್ ಕಾರ್ಮಿಕ ಸಂಘಟನೆಗೆ 1947ರಲ್ಲಿ ಪಾದಾರ್ಪಣೆ ಮಾಡಿದರು. ಮಹಾಯುದ್ಧಗಳ ಪರಿಣಾಮದಿಂದ ಜರ್ಝರಿತವಾಗಿದ್ದ ಕಾರ್ಮಿಕ ವಲಯದ ಸಂಘಟನೆ ಅಂದಿನ ಅಗತ್ಯವಾಗಿತ್ತು. 1947-51ರ ಅವಧಿಯಲ್ಲಿ ಬೊಂಬಾಯಿ ಮಹಾನಗರದಲ್ಲಿ ಬ್ಯಾಂಕುಗಳು ಸರ್ಕಾರಿ ನೌಕರರ ಸಂಘಟನೆಯ ಕಾರ್ಯದಲ್ಲಿ ಕೇಂದ್ರ ಬಿಂದುವಾಗಿದ್ದರು. ಇವರ ಕಾರ್ಮಿಕ ಸಂಘಟನೆಯ ಬಿಸಿ ಹೆಚ್ಚಾದಾಗ ಸರ್ಕಾರ ಇವರನ್ನು ಸೇವೆಯಿಂದ ವಜಾ ಮಾಡಿತು.

1952ರಲ್ಲಿ ಬರಿಗೈಯಲ್ಲಿ ಬೆಂಗಳೂರಿಗೆ ಬಂದ ವೆಂಕಟರಾಮ್ ಅವರಿಗೆ ವಿವಾಹವಾಗಿತ್ತು. ನಿಲ್ಲಲು ನೆಲೆಯಿಲ್ಲ. ಒಂದು ಹೊತ್ತಿನ ಊಟಕ್ಕೂ ಅವರು ಪರದಾಡಬೇಕಿತ್ತು. ಅನ್ಯ ಮಾರ್ಗವಿಲ್ಲದೆ ಪತ್ನಿ ಸರೋಜಳಾದರೂ ಎರಡು ಹೊತ್ತು ಊಟ

ಮಾಡಲಿ ಎಂದು ಕಾಯಿಲೆ ನೆಪಮಾಡಿ, ಸರ್ಕಾರಿ ಆಯುರ್ವೇದ ಆಸ್ಪತ್ರೆಗೆ ದಾಖಿಲು ಮಾಡಿ, ತಾವು ಫುಟ್‌ಪಾತ್ ವಾಸಿಯಾಗಿ ಕಾಲದೂಡಿದರು. ಕೊನೆಗೆ ಮಿನರ್ವ ಮಿಲ್ ನೌಕರರ ಸಂಘದಲ್ಲಿ ರೂ. 50 ಮಾಸಿಕ ಸಂಬಳಕ್ಕೆ ನೌಕರರಾಗಿ ಸೇರಿದರು. ನೌಕರರ ಸಂಘದ ಕಛೇರಿಯೇ ಅವರ ವಾಸದ ಮನೆಯಾಯಿತು. ಒಂದು ವರ್ಷ ಕಳೆಯುವುದರೊಳಗೆ ಅವರು ಆ ಸಂಘದ ಅಧ್ಯಕ್ಷರಾದರು. ಕಾರ್ಮಿಕ ಸಂಘದ ಸಾಮಾನ್ಯ ನೌಕರನೊಬ್ಬ ಮುಂದೊಂದು ದಿನ ವಿಶ್ವಕಾರ್ಮಿಕ ಸಮುದಾಯದಲ್ಲಿ ಭಾರತದ ಕಾರ್ಮಿಕ ಪ್ರತಿನಿಧಿ ಆಗುತ್ತಾನೆಂದು ಭಾವಿಸುವುದಾದರೂ ಹೇಗೆ ? ಅದೇ ವೆಂಕಟರಾಮ್ ಬದುಕಿನ ರೋಚಕ ಕಥೆ. ಈ ಶಕ್ತಿಯನ್ನು ಅವರು ರಾಜಕಾರಣದಿಂದ ಪಡೆಯದೆ, ತನ್ನ ತತ್ವಬದ್ಧತೆ, ಕಾರ್ಯತತ್ಪರತೆ, ಅಚಲವಾದ ನಂಬಿಕೆ, ಕಷ್ಟ ಸಹಿಷ್ಣತೆ ಮೇಲಾಗಿ ಇದೊಂದು ಬದುಕಿನ ಕರ್ತವ್ಯವೆಂದು ತಿಳಿದು ಮುಂದೆ ಸಾಗಿದ್ದೇ ಕಾರಣವಾಯಿತು.

1952 ರಿಂದ 79ರವರೆಗೆ ಕರ್ನಾಟಕದಲ್ಲಿ ಹತ್ತಿ ಗಿರಣಿ, ಮುದ್ರಣ, ಡೈರಿ, ಸರ್ಕಾರಿ ನೌಕರರ ಮತ್ತು ಸಕ್ಕರೆ ಕಾರ್ಖಾನೆ ನೌಕರರ ಸಂಘಗಳ ನಿರಂತರ ನಾಯಕರಾಗಿದ್ದರು. 1969ರಿಂದ 71ರವರೆಗೆ ದೆಹಲಿಯ ಹತ್ತಿ ಗಿರಣಿ ನೌಕರರ ಮತ್ತು ಬಿಹಾರದ ಕಲ್ಲಿದ್ದಲು ನೌಕರರ ಸಂಘಟನೆಯ ನೇತಾರರಾಗಿದ್ದರು. ಸಾವಿಗೆ ಮುನ್ನ ಕರ್ನಾಟಕ ರಾಜ್ಯ ಸಕ್ಕರೆ ಕಾರ್ಖಾನೆ ನೌಕರರ ಮಹಾಮಂಡಲ ಹಾಗೂ ಮುಂಬಯಿನ ಅಖಿಲ ಭಾರತ ಪೆಟ್ರೋ ಕೆಮಿಕಲ್ ನೌಕರರ ಸಂಘದ ಅಧ್ಯಕ್ಷರಾಗಿದ್ದರು. 1952 ರಿಂದ 1962 ರವರೆಗೆ ಹಿಂದ್ ಮಜ್ದೂರ್ ಸಭಾದ ರಾಜ್ಯಕಾರ್ಯದರ್ಶಿಯಾಗಿ, 1970 ರಿಂದ 74ರವರೆಗೆ ಪ್ರಧಾನ ಕಾರ್ಯದರ್ಶಿಯಾಗಿ, 1974 ರಿಂದ 1979ರವರೆಗೆ ಹಿಂದ್ ಮಜ್ದೂರ್ ಪಂಚಾಯತ್ ಅಖಿಲಭಾರತ ಅಧ್ಯಕ್ಷರಾಗಿ, 1979ರ ಫೆಬ್ರವರಿಯಿಂದ ಅಖಿಲಭಾರತ ಹಿಂದ್ ಮಜ್ದೂರ್ ಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿದ್ದರು.

ಹೀಗೆ ರಾಜಕಾರಣ, ರೈತ ಕಾರ್ಮಿಕರ, ನಾಗರೀಕರ ಹೋರಾಟಗಳಲ್ಲಿ ಪಾಲ್ಗೊಂಡ ವೆಂಕಟರಾಮ್ ಅನೇಕ ಬಾರಿ ಸೆರೆಮನೆವಾಸ ಅನುಭವಿಸಿದರು. 1967ರಲ್ಲಿ ನಡೆದ ರಾಜ್ಯ ಸರ್ಕಾರಿ ನೌಕರರ ಐತಿಹಾಸಿಕ ಹೋರಾಟದಲ್ಲಿ ವಿಚಾರಣಾರಹಿತ ಬಂದಿಯಾಗಿ 1975ರ ನವೆಂಬರ್‌ನಿಂದ 1977ರ ಜನವರಿಯವರೆಗೆ ಆಂತರಿಕ ಭದ್ರತಾ ಕಾಯ್ದೆಯನ್ವಯ ಸೆರೆಮನೆವಾಸ ಅನುಭವಿಸಿದರು.

1960 ರಿಂದ 1964ರವರೆಗೆ ಬೆಂಗಳೂರು ನಗರ ಕಾರ್ಪೋರೇಷನ್ ಸದಸ್ಯರಾಗಿ ಹತ್ತಿಗಿರಣಿ ಕಾರ್ಮಿಕರ ಮೀಸಲು ಸ್ಥಾನದಿಂದ ಆಯ್ಕೆಯಾಗಿದ್ದರು. 1978ರಿಂದ ನಿಧನರಾಗುವವರೆಗೆ ವಿಧಾನಸಭೆಯಿಂದ ವಿಧಾನಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದರು. 1950ರ ದಶಕದಲ್ಲಿಸಂಘಟಿಸಿದ ವಿದ್ಯುತ್ ನೌಕರರ ಹೋರಾಟ, ವಿದ್ಯುತ್ ನೌಕರರಿಗೊಂದು ಶಾಶ್ವತ ದ್ವಿಪಕ್ಷೀಯ ಒಪ್ಪಂದಕ್ಕೆ ಕಾರಣವಾಯಿತು. 1966ರಲ್ಲಿ ನಡೆದ ಚರಿತ್ರಾರ್ಹ ರಾಜ್ಯ ಸರ್ಕಾರಿ ನೌಕರರ ಹೋರಾಟ, ರಾಜ್ಯಸರ್ಕಾರಿ ನೌಕರರಿಗೆ ಕೇಂದ್ರ ಮಟ್ಟದ ತುಟ್ಟಿಭತ್ಯೆ ಸಿಗುವಂತಾಗಿದ್ದಲ್ಲದೆ, 1967ರಲ್ಲಿ ನೇಮಿತವಾದ ನ್ಯಾಯಮೂರ್ತಿ ತುಕೋಳ್ ಆಯೋಗಕ್ಕೆ ನೌಕರರ ಪರವಾಗಿ ಸಲ್ಲಿಸಲಾದ ವರದಿಯನ್ನು ಸಿದ್ಧಪಡಿಸಿದರು, ವೆಂಕಟರಾಮ್ ಅವರೇ 1976ರಲ್ಲಿ ಪುನಃ ಶ್ರೀ ನಾರಾಯಣ ಪೈ ಆಯೋಗಕ್ಕೆ ಮನವಿ ಸಲ್ಲಿಸಿದಾಗಲೂ ವೆಂಕಟರಾಮ್ ಅವರೇ ಅದನ್ನು ಸಿದ್ಧಪಡಿಸಿದರು. ವೆಂಕಟರಾಮ್ ಅವರಿಗೆ ಕಾರ್ಮಿಕ ಸಂಘಟನೆಗಳಲ್ಲಿ ಸಂಘರ್ಷಕ್ಕಿಂತ ಸಂಧಾನ ಮಾರ್ಗವೇ ಅವರ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದ್ದವು.

1978ರಲ್ಲಿ ವಿಶ್ವಕಾರ್ಮಿಕ ಕೇಂದ್ರ ಸಮಿತಿಯ ಆಹ್ವಾನದ ಮೇಲೆ ಹಿಂದ್ ಮಜ್ದೂರ್ ಪಂಚಾಯತ್ ಅಧ್ಯಕ್ಷರಾಗಿ ರಷ್ಯಾ ಪ್ರವಾಸ ಕೈಗೊಂಡು ಅಲ್ಲಿನ ಕಾರ್ಮಿಕರ ಸ್ಥಿತಿ-ಗತಿಯ ಅಧ್ಯಯನ ನಡೆಸಿದರು. 1979ರಲ್ಲಿ ಜಿನೀವಾದಲ್ಲಿ ನಡೆದ ವಿಶ್ವಕಾರ್ಮಿಕ ಸಮಾವೇಶದಲ್ಲಿ ಭಾರತದ ಕಾರ್ಮಿಕ ಪ್ರತಿನಿಧಿಯಾಗಿ ಭಾಗವಹಿಸಿದ್ದರು.

ಹೀಗೆ ಹೋರಾಟ, ಸೆರೆಮನೆವಾಸ ಎಡೆಬಿಡದ ಪ್ರಯಾಣಗಳ ನಡುವೆಯೂ ಓದು ಮತ್ತು ಬರವಣಿಗೆಯನ್ನು ಎಂದೂ ನಿಲ್ಲಿಸಿದವರಲ್ಲ. ಅವರ **ಪ್ರದಕ್ಷಿಣೆ,** ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ **ದುಡಿಯುವವರ ದನಿ, ಕಾರ್ಮಿಕರ ವಿವಿಧ ಪ್ರಶ್ನೆಗಳು** ಪ್ರಕಟವಾಗಿದೆ. ಪ್ರಕಟಣೆಗೆ ಇನ್ನೂ ಸಾಕಷ್ಟು ಸಾಮಗ್ರಿ ಇದೆ.

ತುರ್ತು ಪರಿಸ್ಥಿತಿಯ ಸೆರೆಮನೆ ವಾಸ, ನಂತರ ಜನತಾ ಸರ್ಕಾರದ ರಚನೆ, ಆಂತರಿಕ ಭಿನ್ನಾಭಿಪ್ರಾಯಗಳ ಕಾರಣ ಸರ್ಕಾರದ ಪತನ, ಜನತಾ ಪಕ್ಷದ ಹೋಳು, ವೆಂಕಟರಾಮ್ ಮನಸ್ಸಿನ ಮೇಲೆ ತೀವ್ರ ಆಘಾತವನ್ನು ಉಂಟು ಮಾಡಿತ್ತು. ಸಾಯುವ ಮುನ್ನ ಅವರು ಯಾವುದೇ ಪಕ್ಷದ ಸದಸ್ಯರೂ ಆಗಿರದೆ ನಿರ್ಲಿಪ್ತತೆಯಿಂದ ದೂರ ನಿಂತು ದಾರ್ಶನಿಕರಾಗಿದ್ದರು.

ಉತ್ತರ ಭಾರತದ ಕೆಲವೇ ನಾಯಕರ ಯಜಮಾನಿಕೆಯ ರಾಜಕಾರಣದಿಂದ ಬೇಸತ್ತಿದ್ದ ವೆಂಕಟರಾಮ್ ರಾಜ್ಯಗಳ

ಸ್ವಾಯತ್ತತೆಗಾಗಿ ಫೆಡರಲ್ ಸ್ವರೂಪದ ಹೊಸ ವ್ಯವಸ್ಥೆಗೆ ಆಲೋಚನೆ ನಡೆಸಿದ್ದರು. ಶಕ್ತಿರಾಜಕಾರಣದ ರುಚಿ ಕಂಡಿದ್ದ ಸ-ಮಜಾವಾದಿಗಳಿಗೆ, ಮತ್ತೆ ರಾಷ್ಟ್ರವನ್ನು ಕಟ್ಟುವ ಕೆಲಸಕ್ಕೆ ಕೈಗಿಳಿಯಲು ಮನಸ್ಸು ಬರಲಿಲ್ಲ. ಆದರೂ ಹುಟ್ಟು ಹೋರಾಟಗಾರರಾದ ವೆಂಕಟರಾಮ್ ತಮ್ಮ ಸಿದ್ಧಾಂತದಲ್ಲಿ ನಂಬಿಕೆಯಿಟ್ಟು ಯುವಶಕ್ತಿಯನ್ನು ಸಂಘಟಿಸುವ ತಮ್ಮ ಪ್ರಯತ್ನವನ್ನು ಮುಂದುವರೆಸಿದರು. ಕರ್ನಾಟಕದ ರೈತರು-ಕಾರ್ಮಿಕರು, ದುಡಿಯುವ ವರ್ಗ, ಮಹಿಳೆಯರು ಹಿಂದುಳಿದ ಅಲ್ಪಸಂಖ್ಯಾ ವರ್ಗ ಈ ರಾಜ್ಯದ ರಾಜಕಾರಣದ ಹೊಸ ಸಾರಥ್ಯವನ್ನು ವಹಿಸಬೇಕೆಂದು, ಅದಕ್ಕಾಗಿ **'ಕರ್ನಾಟಕ ರಾಜ್ಯ ರೈತ-ಕಾರ್ಮಿಕ ಪರಿಷತ್'** ಎಂಬ ಹೊಸ ಸಂಘಟನೆಗೆ ಪೂರ್ವಸಿದ್ಧತೆ ನಡೆಸಿದ್ದರು. ವಿಧಿ ಅದಕ್ಕೆ ಅವಕಾಶ ಕೊಡಲಿಲ್ಲ. ಕಾಮಾಲೆಯಿಂದ ಪ್ರಜ್ಞೆ ಕಳೆದುಕೊಂಡ ಅವರು 20ನೇ ಜನವರಿ 1981 ರಂದು ಭೌತಿಕವಾಗಿ ನಮ್ಮಿಂದ ದೂರವಾದರು. ಪತ್ನಿ ಸರೋಜ, ಇಬ್ಬರು ಗಂಡು ಮಕ್ಕಳು ಸುರೇಶ್, ಪ್ರದೀಪ್, ಇಬ್ಬರು ಹೆಣ್ಣು ಮಕ್ಕಳು ಗೀತಾ, ಶೋಭ, ಅಪಾರ ಬಂಧು ವರ್ಗ ಹಾಗೂ ಸಾವಿರಾರು ಅಭಿಮಾನಿಗಳು ಹೆಮ್ಮೆಯಿಂದ ನಿತ್ಯ ನೆನೆಯುವ ಚೇತನ **ವೆಂಕಟರಾಮ್**.